# ಸ್ಟೇಟ್ ಬ್ಯಾಂಕ್ ಆಫ್ ಮೈಸೂರು – ತಂತ್ರಜ್ಞಾನ ಆಧಾರಿತ ಸೇವೆಗಳು

## ಎಟಿಎಂ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕರ್ನಾಟಕದ ಪ್ರಮುಖ ವಾಣಿಜ್ಯ ಬ್ಯಾಂಕ್ ಆಗಿದೆ. ದಿನಾಂಕ 31.12.2009ರ ವರ್ಷಾಂತ್ಯಕ್ಕೆ 521 ಎಟಿಎಂಗಳನ್ನು ಹೊಂದಿದೆ. ಇದರಲ್ಲಿ 453 ಎಟಿಎಂ ಗಳು ಕರ್ನಾಟಕದಲ್ಲಿವೆ. ಇವುಗಳಲ್ಲಿ 132 ಎಟಿಎಂಗಳು ಬೆಂಗಳೂರು ನಗರದಲ್ಲಿವೆ. 68 ಎಟಿಎಂಗಳು ಇತರ ರಾಜ್ಯಗಳಲ್ಲಿವೆ. 31ನೇ ಮಾರ್ಚ್ 2010ರ ವೇಳೆಗೆ 800 ಎಟಿಎಂಗಳನ್ನು ಸ್ಥಾಪಿಸುವ ಯೋಜನೆ ಬ್ಯಾಂಕಿಗೆ ಇದೆ. ಎಟಿಎಂಗಳ ಮೂಲಕ ಯುಟಿಲಿಟಿ ಬಿಲ್ಲುಗಳು, ಎಸ್‌ಬಿಐ ಕಾರ್ಡ್ ಬಿಲ್ಲು, ಎಸ್‌ಬಿಐ ಲೈಫ್ ವಿಮಾಕಂತು ಪಾವತಿಸಬಹುದಾಗಿದೆ. ದೇವಾಲಯ/ ಟ್ರಸ್ಟ್ ಇತ್ಯಾದಿಗಳಿಗೆ ದೇಣಿಗೆ ನೀಡಬಹುದಾಗಿದೆ. ಗ್ರಾಹಕರು ಕಾರ್ಡ್‌ನಿಂದ ಕಾರ್ಡ್‌ಗೆ ಹಣ ವರ್ಗಾವಣೆ ಸಹ ಮಾಡಬಹುದಾಗಿದೆ. ಇತರೆ ಬ್ಯಾಂಕಿನ ಉಳಿತಾಯ ಖಾತೆದಾರರಿಗೆ ಏಕಕಾಲಕ್ಕೆ ರೂ.10,000/- ಮೀರದಂತೆ, ಐದು ಹಿಂಪಡೆತಗಳು ಉಚಿತವಾಗಿರುತ್ತವೆ. ಎಸ್‌ಬಿಎಂ ಗ್ರಾಹಕರು ಎಸ್‌ಬಿಐ ಸಮೂಹದ 19000ಕ್ಕೂ ಹೆಚ್ಚಿನ ಎಟಿಎಂಗಳನ್ನು ಉಚಿತವಾಗಿ ಬಳಸಬಹುದಾಗಿದೆ.

### II ಇಂಟರ್‌ನೆಟ್ ಬ್ಯಾಂಕಿಂಗ್

ಎಸ್‌ಬಿಎಂ ಗ್ರಾಹಕರಿಗೆ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಿದೆ. ಕಾರ್ಪೋರೇಟ್ ಗ್ರಾಹಕರು ಮತ್ತು ಇತರ ಗ್ರಾಹಕರು 365 ದಿನಗಳಲ್ಲಿ 24x7 ರೀತಿಯಲ್ಲಿ ಈ ಸೌಲಭ್ಯವನ್ನು ಬಳಸಿ ತಮ್ಮ ಖಾತೆಗಳನ್ನು ನೋಡಬಹುದಾಗಿದೆ ಮತ್ತು ನಿರ್ವಹಿಸಬಹುದಾಗಿದೆ. ಗ್ರಾಹಕರು ತಮ್ಮ ಮನೆಯಿಂದಲೇ ಬ್ಯಾಂಕಿಂಗ್ ವ್ಯವಹಾರವನ್ನು ಇಂಟರ್‌ನೆಟ್ ಮೂಲಕ ಮಾಡಬಹುದಾಗಿದೆ.

**ಅ) ರೀಟೈಲ್ ಗ್ರಾಹಕರಿಗಿರುವ ಸೌಲಭ್ಯಗಳು**

- ಗ್ರಾಹಕರು ಶಾಖಾ ಮತ್ತು ಅಂತರ ಶಾಖಾ ಖಾತೆಗಳಲ್ಲಿ ಪರಸ್ಪರ ಹಣವರ್ಗಾವಣೆ ಮಾಡಬಹುದಾಗಿದೆ.
- ಗ್ರಾಹಕರು ಮೂರನೇ ಕಕ್ಷಿಗಳ ಖಾತೆಗಳಿಗೆ ಆಂತರಿಕ ಬ್ಯಾಂಕ್ ಮಟ್ಟದಲ್ಲಿ ಮತ್ತು ಅಂತರ ಬ್ಯಾಂಕ್ ಮಟ್ಟದಲ್ಲಿ ಹಣ ವರ್ಗಾವಣೆ ಮಾಡಬಹುದಾಗಿದೆ.
- ಖಾತಾ ವಿವರಣೆಗಳನ್ನು ನೋಡಬಹುದಾಗಿದೆ. ಮುದ್ರಿಸಿಕೊಳ್ಳಬಹುದಾಗಿದೆ.
- ಸ್ಥಾಯಿ ನಿರ್ದೇಶಗಳನ್ನು (Standing Instructions) ನೀಡಬಹುದು.
- ಡಿಡಿ ಮತ್ತು ಚೆಕ್ಕು ಪುಸ್ತಕಗಳಿಗಾಗಿ ಆನ್‌ಲೈನ್ ಕೋರಿಕೆ ಸಲ್ಲಿಸಬಹುದು.
- ಬಿಲ್ಲು ಪಾವತಿ ಸೌಲಭ್ಯವಿದೆ.

**ಆ) ಕಾರ್ಪೋರೇಟ್ ಗ್ರಾಹಕರಿಗೆ ವಿಶೇಷ ಸೌಲಭ್ಯಗಳು**

- ಸಂಸ್ಥೆಯ ಬ್ಯಾಂಕಿನ ಯಾವುದೇ ಖಾತೆಗಳಿಗೆ ಪರಸ್ಪರ ಹಣ ವರ್ಗಾವಣೆ.
- ಸರಬರಾಜುದಾರರಿಗೆ, ಮೂರನೇ ಕಕ್ಷಿಗಳಿಗೆ ಹಣ ಪಾವತಿ.
- ವಹಿವಾಟುಗಳು ಪೂರ್ವ ನಿಯೋಜನೆ.
- ಬಹು ಸಂಖ್ಯೆಯ ವ್ಯವಹಾರ ನಿರ್ವಹಣೆ.
- ಕಾರ್ಪೋರೇಟ್ ನೌಕರರಿಗೆ ಸಂಬಳ ಪಾವತಿ.
- ವರಿಷ್ಠಾಧಿಕಾರಿಗಳು ತಮ್ಮ ಸ್ಥಳದಿಂದಲೇ ಖಾತೆಗಳನ್ನು ಪರಿಶೀಲಿಸಬಹುದು. ಜಂಟಿ ಆದೇಶಗಳನ್ನು ಕೂಡ ನೀಡಬಹುದು.
- ವಿದ್ಯುನ್ಮಾನ ತೆರಿಗೆ ಪಾವತಿ (ಸೇವಾ ತೆರಿಗೆ, ಅಬ್ಕಾರಿ ತೆರಿಗೆ ಹಾಗೂ ಆದಾಯ ತೆರಿಗೆ).

### III ಮೊಬೈಲ್ ಬ್ಯಾಂಕಿಂಗ್

ಎಸ್‌ಬಿಎಂ 31.08.2009 ರಿಂದ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು (ಸ್ಟೇಟ್ ಬ್ಯಾಂಕ್ ಫ್ರೀಡಂ) ಫ್ರಾರಂಭಿಸಿದೆ.

**ಸ್ಟೇಟ್ ಬ್ಯಾಂಕ್ ಫ್ರೀಡಂ – ನಿಮ್ಮ ಮೊಬೈಲ್ ನಿಮ್ಮ ಬ್ಯಾಂಕ್** : ನೀವು ಎಲ್ಲಿಂದ ಬೇಕಾದರೂ ಯಾವಾಗ ಬೇಕಾದರೂ 24x7 ಶೈಲಿಯಲ್ಲಿ ಬಿಲ್ಲುಗಳು ಪಾವತಿ ಮಾಡಬಹುದು. ಪ್ರೀತಿ ಪಾತ್ರರಿಗೆ ಹಣ ಕಳಿಸಬಹುದು. ಖಾತೆಯ ಬ್ಯಾಲೆನ್ಸ್ ತಿಳಿದುಕೊಳ್ಳಬಹುದು. ಇದು ಒಂದು ಸರಳ, ಸುಲಭ, ಸುರಕ್ಷಿತ, ಸದಾ, ಸರ್ವತ್ರ ಬ್ಯಾಂಕಿಂಗ್ ಸೌಲಭ್ಯವಾಗಿದೆ.

**ಈ ಕೆಳಗಿನ ಸೇವೆಗಳು ಲಭ್ಯ ಇವೆ.**

- ಹಣ ವರ್ಗಾವಣಿ (NEFT ಆಧರಿಸಿ ಬ್ಯಾಂಕಿನ ಒಳಗೆ ಮತ್ತು ಹೊರಗೆ ಒಂದು ದಿನಕ್ಕೆ ಗರಿಷ್ಟ ರೂ. 5000/- ತಿಂಗಳೊಂದರ ಒಟ್ಟು ಮಿತಿ ರೂ. 30,000/-).
- ವಿಚಾರಣೆ (ಬ್ಯಾಲೆನ್ಸ್ / ಮಿನಿ ಸ್ಟೇಟ್‌ಮೆಂಟ್)
- ವಿನಂತಿ (ಚೆಕ್ಕು ಪುಸ್ತಕ)
- ಬಿಲ್ ಪಾವತಿ (ಯುಟಿಲಿಟಿ ಬಿಲ್ಲುಗಳು, ಕ್ರೆಡಿಟ್ ಕಾರ್ಡ್)
- ಎಂ ಕಾಮರ್ಸ್ (ಮೊಬೈಲ್ ಟಾಪ್ ಆಪ್, ಮರ್ಚೆಂಟ್ ಪೇಮೆಂಟ್, ಎಸ್‌ಬಿಐ ವಿಮಾಕಂತು ಪಾವತಿ)

### IV. ವಿದ್ಯುನ್ಮಾನ ಪಾವತಿ ವ್ಯವಸ್ಥೆ

**ಅ) ಅದೇಕ್ಷಣದ ಸಗಟು ಇತ್ಯರ್ಥ್ಯ (RTGS)**

ಆರ್‌ಟಿಜಿಎಸ್ ವ್ಯವಸ್ಥೆಯಲ್ಲಿ ಗ್ರಾಹಕರು ಅಂತರ ಶಾಖೆ / ಅಂತರ ಬ್ಯಾಂಕ್ ಖಾತೆಗಳಿಗೆ ಹಣಪಾವತಿ ಮಾಡಬಹುದು. ಬ್ಯಾಂಕುಗಳ ನಡುವೆಯೂ ಹಣ ವರ್ಗಾವಣೆ ಮಾಡಬಹುದು. ಹಣ ಪಾವತಿ / ಹಣ ಸ್ವೀಕೃತಿ ಶೀಘ್ರವಾಗಿ ಆಗು ತ್ತದೆ.

ಆರ್‌ಬಿಐ ಈ ವ್ಯವಸ್ಥೆಯನ್ನು ತನ್ನ ಸದಸ್ಯ ಬ್ಯಾಂಕ್‌ಗಳಿಗಾಗಿ ನಿರ್ವಹಿಸುತ್ತದೆ. ಅಂತರ ಶಾಖೆ ಮತ್ತು ಅಂತರ ಬ್ಯಾಂಕ್ ಗಳ ನಡುವೆ ವ್ಯವಹಾರ ಇದರಿಂದ ಸಾಧ್ಯವಾಗುತ್ತದೆ ಈ ಸೌಲಭ್ಯ ಪಡೆಯಲು ಶಾಖೆಗಳು ಆರ್‌ಟಿಜಿಎಸ್ ಸಂಪರ್ಕವನ್ನು ಹೊಂದಿರಬೇಕಾಗುತ್ತದೆ. ಈ ಸೌಲಭ್ಯ ಎಸ್‌ಬಿಎಂನ ಎಲ್ಲಾ ಶಾಖೆಗಳಲ್ಲೂ ಇದೆ.

**ಆ) ರಾಷ್ಟ್ರೀಯ ವಿದುನ್ಮಾನ ನಿಧಿ ವರ್ಗಾವಣೆ (NEFT)**

ಆರ್‌ಬಿಐ ಒಂದು ಹೊಸ ಪಾವತಿ ವಿಧಾನ "ಎನ್‌ಇಎಫ್‌ಟಿ" ಫ್ರಾರಂಭಿಸಿದೆ.

ಈ ಸೌಲಭ್ಯ ಎಸ್‌ಬಿಎಂನ ಎಲ್ಲಾ ಶಾಖೆಗಳಲ್ಲಿಯೂ ಇದೆ. ಇದರಿಂದ ಆ ಶಾಖೆಗಳ ಗ್ರಾಹಕರು ಇತರ ಬ್ಯಾಂಕ್ ಗಳ ಖಾತೆಗಳಿಗೆ ಹಣ ವರ್ಗಾವಣಿ ಮಾಡಬಹುದಾಗಿದೆ. ಈ ವ್ಯವಸ್ಥೆ ಆರ್‌ಬಿಐ ಅನುಮೋದಿಸಿರುವ ಬ್ಯಾಂಕ್ ಗಳಿಗೆ ಮಾತ್ರ ಅನ್ವಯಿಸುತ್ತದೆ. ಅನುಮೋದಿತ ಬ್ಯಾಂಕ್‌ಗಳು ಹಣಕಳಿಸುವ ಮತ್ತು ಸ್ವೀಕರಿಸುವ ಸೌಲಭ್ಯ ಹೊಂದಿರುತ್ತವೆ.

**ಇ)ಸ್ಟೇಟ್ ಬ್ಯಾಂಕ್ ಸಮೂಹ ಪಾವತಿ ಪದ್ಧತಿ (SBGRPT):**

ಬ್ಯಾಂಕುಗಳು ಕಾಗದ ದಾಖಲೆ ಆಧರಿಸಿ ಮಾಡುವ ನಿಧಿ ವರ್ಗಾವಣೆಯಿಂದ ವಿದ್ಯುನ್ಮಾನ ವ್ಯವಸ್ಥೆಗೆ ಬದಲಾಯಿಸುವುದು ಆರ್‌ಬಿಐನ ಆಶಯವಾಗಿರುತ್ತದೆ. ಎಸ್‌ಬಿಐ ತನ್ನ ಹಾಗೂ ಸಹವರ್ತಿ ಬ್ಯಾಂಕುಗಳ ಶಾಖೆಗಳಲ್ಲಿ ಗ್ರಾಹಕರಿಗೆ ಸ್ಟೇಟ್ ಬ್ಯಾಂಕ್ ಸಮೂಹ ಪಾವತಿ ಪದ್ಧತಿಯನ್ನು ಪರಿಚಯಿಸಿರುತ್ತದೆ. ಅದೇ ರೀತಿಯಾಗಿ ಸ್ಟೇಟ್ ಬ್ಯಾಂಕ್ ಸಮೂಹ ಪಾವತಿ ಪದ್ಧತಿಯಲ್ಲಿ ಎಲ್ಲಾ ಸ್ಟೇಟ್ ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಯಾವುದೇ ಸ್ಟೇಟ್ ಬ್ಯಾಂಕ್ ಖಾತೆಗೆ ಹಣ ಕಳುಹಿಸುವ ಹಾಗೂ ಸ್ವೀಕರಿಸುವ ಸೌಲಭ್ಯವನ್ನು ನೀಡುತ್ತವೆ. ಎಸ್‌ಬಿಎಂನ ಎಲ್ಲಾ ಶಾಖೆಗಳಲ್ಲೂ ಈ ಸೌಲಭ್ಯವಿದೆ.